AUGUST 19, 2025

AKASHAVANI - DHARWAD

PRADESH SAMACHARA (KANNADA) 12.00 P.M.

<><><>

ಪ್ರಸಾರ ಭಾರತಿ, ಆಕಾಶವಾಣಿ

ಧಾರವಾಡ

ಪ್ರದೇಶ ಸಮಾಚಾರ

<><><>

ಹಾಲು ಒಕ್ಕೂಟಗಳು, ಸ್ಥಳೀಯ ಪರಿಸ್ಥಿತಿಗೆ ಅನುಗುಣವಾಗಿ, ಹೈನುಗಾರರಿಗೆ ಪಾವತಿಸುವ ಹಾಲು ಖರೀದಿ ದರವನ್ನು ನಿಗದಿ ಮಾಡುತ್ತಿವೆ; ಸರ್ಕಾರದ ಮಧ್ಯಸ್ಥಿಕೆ ಇಲ್ಲ ಎಂದು, ಪಶು ಸಂಗೋಪನಾ ಖಾತೆ ಸಚಿವ ಕೆ. ವೆಂಕಟೇಶ ತಿಳಿಸಿದ್ದಾರೆ. ವಿಧಾನಸಭೆ ಪ್ರಶ್ನೋತ್ತರ ಕಲಾಪದಲ್ಲಿ, ವಿಧಾನಸಭೆ ವಿಪಕ್ಷ ಉಪ ನಾಯಕ, ಅರವಿಂದ ಬೆಲ್ಲದ ಅವರ ಪ್ರಶ್ನೆಗೆ, ಸಚಿವರು ಉತ್ತರಿಸಿದರು. ಮುಂಬರುವ ದಿನಗಳಲ್ಲಿ, ಹಾಲಿನ ದರಕ್ಕೆ ಸಂಬಂಧಪಟ್ಟಂತೆ, ಸರ್ಕಾರದ ಗಮನಕ್ಕೆ ತರದೇ, ಕ್ರಮ ಕೈಗೊಳ್ಳದಂತೆ, ಹಾಲು ಒಕ್ಕೂಟಗಳಿಗೆ ಸೂಚಿಸಿದ್ದಾಗಿ, ಸ್ಪಷ್ಟ ಪಡಿಸಿದರು.

<><><>

ರಾಜ್ಯದ ಮಲೆನಾಡು ಹಾಗೂ ಕರಾವಳಿ ಭಾಗದ 7 ಜಿಲ್ಲೆಗಳಲ್ಲಿ, ಭೂ ಕುಸಿತ ತಡೆಗಟ್ಟಲು, 500 ಕೋಟಿ ರೂಪಾಯಿ ವೆಚ್ಚದಲ್ಲಿ, ಹಲವು ಯೋಜನೆ ಕಾರ್ಯಗತಗೊಂಡಿವೆ ಎಂದು, ಕಂದಾಯ ಖಾತೆ ಸಚಿವ, ಕೃಷ್ಣ ಬೈರೇಗೌಡ ತಿಳಿಸಿದ್ದಾರೆ. ಶಾಸಕ ಮಂಥರ್ ಗೌಡ ಅವರ ಪ್ರಶ್ನೆಗೆ, ವಿಧಾನಸಭೆಯ ಕಲಾಪದಲ್ಲಿ ಉತ್ತರಿಸಿದ ಸಚಿವರು, ಕೊಡಗು ಜಿಲ್ಲೆಗೆ, 50 ಕೋಟಿ ರೂಪಾಯಿ ಬಿಡುಗಡೆ ಮಾಡಲಾಗಿದೆ, ಎಂದರು.

<><><>

ವಿಜಯನಗರ ಜಿಲ್ಲೆ, ತುಂಗಭದ್ರಾ ಅಣೆಕಟ್ಟೆಯ, ಕ್ರಸ್ಟ್ ಗೇಟ್‌ಗಳ ದುರಸ್ತಿಗೆ, 48 ಕೋಟಿ ರೂಪಾಯಿ ವೆಚ್ಚದಲ್ಲಿ, ಟೆಂಡರ್ ಕರೆಯಲಾಗಿದೆ. 50 ಟನ್ ತೂಕದ ಒಂದು ಗೇಟ್ ಸಿದ್ಧವಾಗಿದೆ. ನಿರಂತರ ಮಳೆಯಿಂದಾಗಿ, ಅಳವಡಿಕೆ ಸಾಧ್ಯವಾಗಿಲ್ಲ ಎಂದು, ವಿಧಾನ ಪರಿಷತ್ ಸಭಾ ನಾಯಕ ಎನ್.ಎಸ್. ಬೋಸರಾಜು ತಿಳಿಸಿದ್ದಾರೆ. ವಿಧಾನ ಪರಿಷತ್ ಕಲಾಪದ ಶೂನ್ಯ ವೇಳೆಯಲ್ಲಿ, ಸದಸ್ಯೆ ಹೇಮಲತಾ ನಾಯಕ್ ಅವರ ಪ್ರಶ್ನೆಗೆ ಸಚಿವರು, ಉತ್ತರಿಸಿದರು.

<><><>

ಡಿ. ದೇವರಾಜ ಅರಸು ಅವರ, 110ನೇ ಜನ್ಮ ದಿನ ನಾಳೆ. ಪ್ರತಿಷ್ಠಿತ ಡಿ. ದೇವರಾಜ ಅರಸು ಪ್ರಶಸ್ತಿಗೆ, ಉಡುಪಿ ಜಿಲ್ಲೆ, ಕಾರ್ಕಳದ ಹಿರಿಯ ಪತ್ರಕರ್ತ, 95 ವರ್ಷಗಳ, ಕಲ್ಲೆ ಶಿವೋತ್ತಮ ರಾವ ಆಯ್ಕೆಯಾಗಿದ್ದಾರೆ. ಪ್ರಶಸ್ತಿ 5 ಲಕ್ಷ ರೂಪಾಯಿ ನಗದು ಹಾಗೂ ಸ್ಮರಣಿಕೆ ಒಳಗೊಂಡಿದೆ.

<><><>

ಗೋವಾ–ತಮ್ನಾರ್ ವಿದ್ಯುತ್ ಯೋಜನೆಯನ್ನು, ತಡೆ ಹಿಡಿದು, ಮರು ಪರಿಶೀಲಿಸುವಂತೆ, ಮಹದಾಯಿ–ಕಳಸಾ ಬಂಡೂರಿ ಹೋರಾಟಗಾರರು, ನವಲಗುಂದ ಶಾಸಕ ಎನ್.ಎಚ್. ಕೋನರಡ್ಡಿ ನೇತೃತ್ವದ ನಿಯೋಗ, ಬೆಂಗಳೂರಿನಲ್ಲಿ, ಮುಖ್ಯಮಂತ್ರಿ ಹಾಗೂ ಉಪ ಮುಖ್ಯಮಂತ್ರಿ ಅವರನ್ನು ಭೇಟಿ ಮಾಡಿ, ಒತ್ತಾಯಿಸಿದೆ. ಕಳಸಾ–ಬಂಡೂರಿ ಯೋಜನೆಗೆ, ಬೆಳಗಾವಿ ಜಿಲ್ಲೆ,

ಖಾನಾಪುರ ತಾಲೂಕಿನ ಅರಣ್ಯ ಪ್ರದೇಶವನ್ನು ಬಳಸಿಕೊಳ್ಳಲು ಅನುಮತಿ ಕೋರಿ, ಕೇಂದ್ರ ಪರಿಸರ ಇಲಾಖೆ ಹಾಗೂ ವನ್ಯಜೀವಿ ಮಂಡಳಿಗೆ ಸಲ್ಲಿಸಿದ, ರಾಜ್ಯದ ಪ್ರಸ್ತಾವ ನನೆಗುದಿಗೆ ಬಿದ್ದಿದೆ, ಎಂದು ನಿಯೋಗ ಅಸಮಾಧಾನ ವ್ಯಕ್ತಪಡಿಸಿತು.

<><><>

ಕಲಬುರಗಿ ಜಿಲ್ಲೆ, ಚಿತ್ತಾಪುರದ ಗುಂಡಗರ್ತಿಯಲ್ಲಿ ನಿರ್ಮಿತ, ಲುಂಬಿನಿ ಉದ್ಯಾನ, ಹಸಿರಿನ ತೋರಣದಂತೆ, ಕಂಗೊಳಿಸುತ್ತಿದೆ; ಶ್ವಾಸಕೋಶದ ಮಾದರಿಯಲ್ಲಿ, ಪ್ರಶಾಂತ ವಾತಾವರಣ, ಜನರನ್ನ ್ಟೇ ಅಲ್ಲ, ಪ್ರಾಣಿ, ಪಕ್ಷಿಗಳನ್ನೂ ಸೆಳೆಯುತ್ತಿದೆ ಎಂದು, ಜಿಲ್ಲಾ ಉಸ್ತುವಾರಿ ಸಚಿವ ಪ್ರಿಯಾಂಕ ಖರ್ಗೆ ತಿಳಿಸಿದ್ದಾರೆ.

<><><>

ಕೇಂದ್ರ ಗೃಹ ಸಚಿವಾಲಯ, ರಾಷ್ಟ್ರೀಯ ಸೈಬರ್ ಅಪರಾಧ ವರದಿ ಪೋರ್ಟಲ್ www.cybercrime.gov.in ಮತ್ತು ರಾಷ್ಟ್ರೀಯ ಸೈಬರ್ ಸಹಾಯವಾಣಿ ಸಂಖ್ಯೆ 1–9–3–0 ಆರಂಭಿಸಿದೆ. ಆನ್ಲೈನ್ ಹಣಕಾಸು ವಂಚನೆ ಹಾಗೂ ಇತರೆ ಸೈಬರ್ ಅಪರಾಧಗಳನ್ನು ತಕ್ಷಣ ವರದಿ ಮಾಡಲು ಅನುವು ಮಾಡುತ್ತದೆ. ರಾಜ್ಯ ಮಟ್ಟದ ಡಿಜಿಟಲ್ ಸಾಕ್ಷರತಾ ಕಾರ್ಯಕ್ರಮ ಹಾಗೂ ಸೈಬರ್ ಜಾಗೃತಿ ಅಭಿಯಾನ ಕೈಗೊಳ್ಳಲಾಗುತ್ತಿದೆ.

<><><>

ಧಾರವಾಡದ, ಧವಳಗಿರಿಯ, ಶ್ರೀ ಧರ್ಮಸ್ಥಳ ಅಭಿಯಾಂತ್ರಿಕ ಮತ್ತು ತಾಂತ್ರಿಕ ಮಹಾವಿದ್ಯಾಲಯದಲ್ಲಿ, "ಶಿಕ್ಷಣ ಮತ್ತು ವೃತ್ತಿಪರ ಬೆಳವಣಿಗೆ" ವಿಷಯದ, ಐದು ದಿನಗಳ ವಿಶೇಷ ಬೋಧನಾ ಕಾರ್ಯಾಗಾರ, ಪ್ರಾಧ್ಯಾಪಕರಿಗಾಗಿ ಆಯೋಜಿತವಾಗಿದೆ. ಮಹಾವಿದ್ಯಾಲಯದ ಪ್ರಾಂಶುಪಾಲ, ಪ್ರೊಫೆಸರ್ ರಮೇಶ ಚಕ್ರಸಾಲಿ ಅವರು, ಪ್ರದೇಶ ಸಮಾಚಾರಕ್ಕಾಗಿ, ಮಾಹಿತಿ ನೀಡಿದ್ದಾರೆ.

<><><>

ರಮೇಶ ಚಕ್ರಸಾಲಿ ಧ್ವನಿ 30 ಸೆಕೆಂದುಗಳು

<><><>

ಹುಬ್ಬಳ್ಳಿಯ ಕೆ.ಎಲ್.ಇ. ಅಭಿಯಾಂತ್ರಿಕ ಮತ್ತು ತಾಂತ್ರಿಕ ವಿಶ್ವವಿದ್ಯಾಲಯದ, ಮ್ಯಾನೇಜ್‌ಮೆಂಟ್ ಸ್ಟಡೀಸ್ ಆಂಡ್ ರಿಸರ್ಚ್ ಸ್ಕೂಲ್‌ನಲ್ಲಿ, ಇಂದು, ಸಮಕಾಲೀನ ವ್ಯಾವಹಾರಿಕ ಜಗತ್ತಿನಲ್ಲಿ, ಕೃತಕ ಬುದ್ಧಿಮತ್ತೆ, ಜನರೇಟಿವ್ ಎ.ಐ. ಕುರಿತು, ಗಣಕಯಂತ್ರ ತಂತ್ರಜ್ಞಾನ ಅಧ್ಯಯನ ವಿಭಾಗಗಳ ಪ್ರಾಧ್ಯಾಪಕರಿಗೆ, ತರಬೇತಿ ಕಾರ್ಯಾಗಾರ ಆಯೋಜಿತವಾಗಿದೆ.

<><><>

ಧಾರವಾಡ ಜಿಲ್ಲೆಯಲ್ಲಿ, ನಿರತರ ಮಳೆಯಾಗುತ್ತಿದ್ದು, ಬೆಣ್ಣಿ ಹಳ್ಳ, ತುಪ್ಪರಿ ಹಳ್ಳ, ಬೇಡ್ತಿ ಹಳ್ಳ ಸಹಿತ, ವಿವಿಧ ಹಳ್ಳಗಳು ಮೈದುಂಬಿ ಹರಿಯುವ ಸಾಧ್ಯತೆ ಇದೆ; ತಾಲೂಕಾಡಳಿತಗಳು ಕಟ್ಟೆಚ್ಚರ ವಹಿಸುವಂತೆ, ಜಿಲ್ಲಾಧಿಕಾರಿ ದಿವ್ಯಾ ಪ್ರಭು ಸೂಚಿಸಿದ್ದಾರೆ. ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ, ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರದ ಸಭೆಯ ಅಧ್ಯಕ್ಷತೆ ವಹಿಸಿ, ತಗ್ಗು ಪ್ರದೇಶ, ಹಳ್ಳ, ಕೆರೆಗಳ ಮಟ್ಟವನ್ನು ನಿರಂತರ ಪರಿಶೀಲಿಸಬೇಕು. ಸುರಕ್ಷಿತ ಸ್ಥಳಗಳಿಗೆ ಜನರನ್ನು ಸ್ಥಳಾಂತರಿಸಲು, ಸನ್ನದ್ಧ ಸ್ಥಿತಿಯಲ್ಲಿ ಇರುವಂತೆ, ಆದೇಶಿಸಿದರು.

<><><>

ಕಾರವಾರ ಜಿಲ್ಲಾಧಿಕಾರಿ ಲಕ್ಷ್ಮೀಪ್ರಿಯಾ, ಬಂಗಾಳ ಕೊಲ್ಲಿಯಲ್ಲಿ ವಾಯುಭಾರ ಕುಸಿತದ ಹಿನ್ನೆಲೆ, ಮೀನುಗಾರರು ಸಮುದ್ರಕ್ಕೆ ಇಳಿಯದಂತೆ, ಸೂಚಿಸಿದ್ದಾರೆ.

<><><>

ವಿದ್ಯುತ್ ಇಲಾಖೆಯಡಿ, ಪ್ರಾಣಾಪಾಯದ ಸ್ಥಳಗಳಲ್ಲಿ ಕೆಲಸ ಮಾಡುತ್ತಿರುವ, 23 ಸಾವಿರ ಗುತ್ತಿಗೆ ಆಧಾರಿತ ಸಿಬ್ಬಂದಿಗೆ, ಸೇವಾ ಭದ್ರತೆ ಒದಗಿಸಲು, ರಾಜ್ಯ ಸರ್ಕಾರ ಮುಂದಾಗಿದೆ. ಇಂಧನ ಇಲಾಖೆಯ, ಅಪರ ಮುಖ್ಯ ಕಾರ್ಯದರ್ಶಿಗೆ, ಈ ಕುರಿತು ಶೀಘ್ರ ಮಾಹಿತಿ ಒದಗಿಸುವಂತೆ, ಸಚಿವ ಎಚ್.ಕೆ. ಪಾಟೀಲ, ಸೂಚಿಸಿದ್ದಾರೆ.

<><><>

ಹುಬ್ಬಳ್ಳಿ ಧಾರವಾಡ ಮಹಾನಗರ ಪಾಲಿಕೆ, ಸರ್ಕಾರೇತರ ಸ್ವಯಂಸೇವಾ ಸಂಸ್ಥೆ, ನೇಚರ್ ಕೇರ್ ಸೊಲ್ಯೂ ನ್ಸ್ ಜೊತೆಗೂಡಿ, ಜಲ ರಹಿತ ಮೂತ್ರಾಲಯ ವಾಟರ್ ಲೆಸ್ ಯುರಿನಲ್ಸ್ ಅಳವಡಿಸಲು ಯೋಜನೆ ರೂಪಿಸಿದೆ. ದುರ್ಗಂಧ ರಹಿತ, ಪರಿಸರ ಸ್ನೇಹಿ ಮೂತ್ರಾಲಯಗಳಾಗಿದ್ದು, ಕಾರ್ಬನ್ ಹೊರಸೂಸುವಿಕೆಯನ್ನು ಕಡಿಮೆ ಮಾಡಲಿದೆ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ ಮಧ್ಯಾಹ್ನ 1 ಗಂಟೆ 10 ನಿಮಿಷಕ್ಕೆ.